**GOVERNMENT OF KARNATAKA**

**KARNATAKA LOKAYUKTA**

NO.UPLOK-1/DE/590/2017/ARE-16
(Encl: (a) Recommendation of Hon'ble Upalokayukta&Inquiry Report of Inq.Officer, in original
(b) Connected records

Multi Storied Building,
Dr. B.R. AmbedkarVeedhi,
Bengaluru – 560 001
Date: 17/06/2020

**/CONFIDENTIAL/**

To,

Sri Manoj Kumar Meena, I.A.S.,
Secretary to Government,
Housing Department,
2nd Floor,Vikasa Soudha,
Bengaluru.

**Respected Sir,**

Sub:- Departmental inquiry against;

1) Sri K.N. Kulkarni, the then Executive Engineer, Karnataka Housing Board, Ballari;

2) Sri B.Y. Nilugal, Assistant Executive Engineer, Karnataka Housing Board, Koppal-Reg.

Ref:-

1) Order No. ಕಗೃಮಂ/ಆಡಳಿತ/ಸಿ.ಶಾ.1/ಪಿ.ಆರ್/25/2016-17, Bangaluru dated 21/03/2017 of Housing Commissioner, Karnataka Housing Board, Bengaluru.

2) Inquiry Report dated: 15/06/2020 Of Additional Registrar of Enquiries-16, Karnataka Lokayukta, Bengaluru

3) Recommendation dated: 17/06/2020 of Hon'ble Upalokayukta-1, State of Karnataka, Bengaluru.

*****

Adverting to the above, I am directed to forward herewith the Recommendations of the Hon'ble Upalokayukta-I, State of Karnataka, Bengaluru, dated 17/06/2020 in original, and the

Report of the Inquiry Officer, in original, along with relevant records of inquiry, as detailed below:

**INDEX**

| Sl. No. | Particulars of Documents | Page Nos. |
|---|---|---|
| | One Sealed cover containing the recommendation dated 17/06/2020 of Hon'ble Upalokayukta-1, and inquiry report dated 15/06/2020 in originals. | |
| File 1 | Order Sheet File (Original). | 01 to 16 |
| File 2 | Documents containing : | |
| | I. 12(3) report of Hon'ble Upalokayukta-I, dated: 16/12/2016 (xerox). | 17 to 19 |
| | II. Government Order No. ಕಗ್ರಮಂ/ಆಡಳಿತ/ಸಿ.ಶಾ.I/ಜಿಆರ್/ 25/16-17, ಬೆಂಗಳೂರು, ದಿನಾಂಕ 21/03/2017. (xerox) | 20 to 21 |
| | III. Nomination order No: Uplok-1/DE/590/2017 Bengaluru, dated: 25/04/2017 of Hon'ble Upalokayukta-I, Bangalore. (Xerox) | 22 to 23 |
| | IV. Served copy of Articles of charges dtd.01/08/2017 and 05.09.2017. (Xerox) | 24 to 33 |
| | V. First Oral Statement of DGO-1 dtd: 31/08/2017 (original) | 34 |
| | VI. First Oral Statement of DGO-2 dtd: 28/10/2017 (original) | 35 |
| | VII. Written statement of DGO-1 dt.26/05/2018, (original) | 36 to 38 |
| | VIII. Written statement of DGO-2 dt. 26/05/2018, (original) | 39 to 41 |
| | IX. Second oral statements of DGOs-1 and 2 dt.18/12/2019. (original) | 42 to 43 |
| | X. Defense Statement of DGOs-1 & 2 dated06.01.2020. (original) | 44 to 50 |
| | XI. Written arguments of DGOs 1 and 2 dated 09/03/2020. (original) | 51 to 58 |
| File 3 | Witness examined on behalf of the Disciplinary Authority | |
| | PW-1: Sri. Zakeer Hussain, dt.12/06/2019 (Complainant) (original) | 59 to 62 |
| | PW-2: Sri. Mudiyappa Chikkareddy, dt. 26/08/2019 (Investigation Officer) (original) | 63 to 66 |
| | Witness examined on behalf of the DGO | |
| | DW-1: Sri. K.N. Kulkarni dt.27/2/2020 (DGO-1) (Original) | 67 to 69 |
| | DW-2: Sri. B.Y. Nilgal dt.27/2/2020 (DGO-2) (Original) | 70 to 72 |
| File 4 | Documents marked on behalf of Disciplinary Authority | |
| | Ex.P-1: Original Complaint dated: 07.04.2014 addressed to Registrar, KLA, Bengaluru. (original) | 73 to 74 |
| | Ex.P-2: Form No. I (Complaint) dated: 07.04.2014 (original) | 75 to 76 |

| | | |
|---|---|---|
| | Ex.P-3: Form No. II (Affidavit) dated 07.04.2014 (original) | 77 |
| | Ex.P-4 P-6: Along with complaint 3 letters enclosed by to the complainant. (Xerox) | 78 to 80 |
| | Ex.P-7: 12 photos to show the status of the house, road, borwell and electricity in KHB extenstion. (original) | 81 to 84 |
| | Ex.P-8: Investigation Report of I.O. dated: 17.04.2015. (original) | 85 to 90 |
| | Ex.P.9: Statement of DGO-2 dated: 09.01.2015 before the IO. (original) | 91 |
| | Ex.P.10: Statement of Smt. G. Shilpa, JE, Technical Wing, CMC Koppal dated: 17.04.2015 before the IO. (original) | 92 |
| | Ex.P.11: I.O. collected 6 pages from Koppal CMC, for having received the possession of KHB houses to CMC. (certified copies) | 93 to 101 |
| | Ex.P.12: KHB houses, road 20 photos pested in 10 pages collected by IO. (original) | 102 to 111 |
| File No.5 | Documents marked on behalf of DGOs | |
| | Ex.D.1: List of members present on 10.03.2011 for recommendation of 1st milestone bill of KHB Bellary. (Xerox) | 112 |
| | Ex.D.2: List of members present on 24.08.2011 for recommendation of 2st milestone bill of KHB Bellary. (Xerox) | 113 |
| | Ex.D.3: Letter of Commissioner CMC Koppal dated: 21.07.2014 addresse to AEE, KHB, Koppal for having taken possession of 28 acer and 20 guntas from KHB for maintaince. (Xerox) | 114 |
| | Ex.D.4: Investigation Note sheet of AEE, TAC, Kla, Bengaluru dated: 28.01.2016. (original) | 115 to 126 |

Receipt of the Recommendation of the Hon'ble Upalokayukta-I, along with the Report of the Inquiry Officer in a sealed cover and the connected inquiry records, as mentioned above, may please be acknowledged, at the earliest.

Yours faithfully,

17/6/2020

**(USHARANI)**
Registrar,
Karnataka Lokayukta,
Bengaluru

Copy to
Addl. Registrar of Enquiries -16, Karnataka Lokayukta, Bengaluru along with copy of recommendation, for information and further necessary action.

**GOVERNMENT OF KARNATAKA**

**KARNATAKA LOKAYUKTA**

No.UPLOK-1/DE/590/2017/ARE-16

Multi Storied Building,
Dr. B.R. Ambedkar Veedhi,
Bengaluru-560 001
Date: **17/06/2020**

**RECOMMENDATION**

Sub:- Departmental inquiry against;

1) Sri K.N. Kulkarni, the then Executive Engineer, Karnataka Housing Board, Ballari;

2) Sri B.Y. Nilugal, Assistant Executive Engineer, Karnataka Housing Board, Koppal – Reg.

Ref:- 1) Order No. ಕಗೃಮಂ/ಆಡಳಿತ/ಸಿ.ಶಾ.1/ಪಿ.ಆರ್/25/2016-17, Bengaluru dated 21/3/2017 of Housing Commissioner, Karnataka Housing Board, Bengaluru.

2) Nomination order No.UPLOK-1/DE/590/2017, Bengaluru dated 25/4/2017 of Upalokayukta-1, State of Karnataka, Bengaluru

3) Inquiry Report dated 15/6/2020 of Additional Registrar of Enquiries-16, Karnataka Lokayukta, Bengaluru

----

The Housing Commissioner, Karnataka Housing Board, Bengaluru by its order dated 21/3/2017 initiated the disciplinary proceedings against (1) Sri K.N.Kulkarni, Executive Engineer, Karnataka Housing Board, Ballari and (2) Sri B.Y. Nilugal, Assistant Executive Engineer, Karnataka Housing Board, Koppal (hereinafter referred to as Delinquent Government Official, for short as DGO) and entrusted the Departmental Inquiry to this Institution.

2. This Institution by Nomination Order No.UPLOK-1/DE/590/2017 Bengaluru dated 25/4/2017 nominated Additional Registrar of Enquiries-11, Karnataka Lokayukta, Bengaluru, as the Inquiry

Officer to frame charges and to conduct Departmental Inquiry against DGO for the alleged charge of misconduct, said to have been committed by him. Subsequently, by Order No.UPLOK-1&2/ DE/Transfers/2019 dated 7/2/2019, the Additional Registrar of Enquiries-16, Karnataka Lokayukta, Bengaluru was re-nominated as inquiry officer to conduct departmental inquiry against DGO.

3. The DGO-1 Sri K.N.Kulkarni, Executive Engineer, Karnataka Housing Board, Ballari and DGO-2 Sri B.Y. Nilugal, Assistant Executive Engineer, Karnataka Housing Board, Koppal was tried for the following charge:-

> "ನೀವು ಎಂದರೆ ಒಂದನೆಯ ಆಪಾದಿತ ಸರ್ಕಾರಿ ನೌಕರರಾದ ಕೆ.ಎನ್.ಕುಲಕರ್ಣಿರವರು ಈ ಮೊದಲು ಬಳ್ಳಾರಿಯ ಸಮನ್ವಯ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸಿಕೊಂಡಿದ್ದಾಗ ಮತ್ತು ನೀವು ಎಂದರೆ ಎರಡನೆಯ ಆಪಾದಿತ ಸರ್ಕಾರಿ ನೌಕರರಾದ ಬಿ.ವೈ.ನಿಲುಗಲ್ ರವರು ಈ ಮೊದಲು ಕೊಪ್ಪಳ ಜಿಲ್ಲಾ ಯೋಜನಾ ಕಛೇರಿಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಕೆಲಸ ಮಾಡಿಕೊಂಡಿದ್ದಾಗ, ಕೊಪ್ಪಳ ಜಿಲ್ಲೆಯಲ್ಲಿ ಗಣೇಶ್‌ನಗರದಲ್ಲಿ ಕರ್ನಾಟಕ ಹೌಸಿಂಗ್ ಬೋರ್ಡ್‌ನವರು ಅಭಿವೃದ್ಧಿಪಡಿಸಿರುವ ಬಡಾವಣೆಯಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿರುವುದಿಲ್ಲ ಮತ್ತು ಅಭಿವೃದ್ಧಿಪಡಿಸಿರುವ ಬಡಾವಣೆಯು ಕಳಪೆ ಮಟ್ಟದಿಂದ ಕೂಡಿದ್ದು, ಸದರಿ ಕರ್ತವ್ಯಲೋಪಕ್ಕೆ ನೀವುಗಳು ಜವಾಬ್ದಾರರಾಗಿದ್ದು, ಆ ಮೂಲಕ ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1)ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ."

4. The Inquiry Officer (Additional Registrar of Enquiries-16) on proper appreciation of oral and documentary evidence has held that the Disciplinary Authority has proved the above charge against DGO-1 Sri K.N.Kulkarni, Executive Engineer, Karnataka Housing Board, Ballari and DGO-2 Sri B.Y. Nilugal, Assistant Executive Engineer, Karnataka Housing Board, Koppal.

5. On re-consideration of inquiry report, I do not find any reason to interfere with the findings recorded by the Inquiry Officer. It is hereby recommended to the Government to accept the report of Inquiry Officer.

6. As per the First Oral Statements submitted by DGOs 1 & 2;

(i) DGO-1 Sri K.N.Kulkarni has retired from service on 31/1/2019 (during the pendency of inquiry).

(ii) DGO-2 Sri B.Y. Nilugal is due to retire from service on 29/2/2024.

7. Having regard to the nature of charge proved against DGO-1 Sri K.N. Kulkarni and DGO-2 Sri B.Y. Nilugal,

(i) it is hereby recommended to the Government for imposing penalty of withholding 10% of pension payable to DGO-1 Sri K.N.Kulkarni, Executive Engineer, Karnataka Housing Board, Ballari for a period of 10 years;

(ii) it is hereby recommended to the Government for imposing penalty of reducing the pay in the time scale of pay by four lower stages with cumulative effect on DGO-2 Sri B.Y. Nilugal, Assistant Executive Engineer, Karnataka Housing Board, Koppal.

8. Action taken in the matter shall be intimated to this Authority.

Connected records are enclosed herewith.

**(JUSTICE N. ANANDA)** 17/6.
Upalokayukta-1,
State of Karnataka,
Bengaluru

## ಕರ್ನಾಟಕ ಲೋಕಾಯುಕ್ತ

ನಂ. ಉಪಲೋಕ್-1/ಡಿಇ-590/2017/ಎ.ಆರ್.ಇ-16

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 15.06.2020.

## ವಿಚಾರಣಾ ವರದಿ

ಉಪಸ್ಥಿತರು: **ಸೆಲ್ವಕುಮಾರ್.ಸಿ,** ಅಪರ ನಿಬಂಧಕರು ವಿಚಾರಣೆಗಳು-16,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌ-1) ಶ್ರೀ **ಕೆ.ಎನ್. ಕುಲಕರ್ಣಿ,** ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಬಳ್ಳಾರಿ ಮತ್ತು 2) ಶ್ರೀ **ಬಿ.ವೈ. ನಿಲುಗಲ್,** ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕೊಪ್ಪಳ ರವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/1187/2014/ಎಆರ್‌ಇ-5 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 16/12/2016.
2. ಆದೇಶ ಸಂಖ್ಯೆ: ಕಗೃಮಂ/ಆಡಳಿತ/ಸಿ.ಶಾ.1/ಪಿಆರ್/25/2016-17 ಬೆಂಗಳೂರು, ದಿನಾಂಕ: 21.03.2017.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-1/ಡಿಇ/590/2017, ಬೆಂಗಳೂರು ದಿನಾಂಕ: 25.04.2017.
4. Note No.Uplok-1 & 2/DE/Transfers/2019, dated 07/02/2019.

* * * *

ಈ ದೂರನ್ನು, ದೂರುದಾರರಾದ ಶ್ರೀ **ಜಾಕೀರ್ ಹುಸೇನ್** ಬಿನ್ ಖಾಜಾ ಹುಸೇನ್ ಕಿಲ್ಲೇದಾರ್, ಗಣೇಶನಗರ ಹೌಸಿಂಗ್ ಬೋರ್ಡ್ ಕಾಲೋನಿ, ಕೊಪ್ಪಳ ಇವರು ಆ.ಸ.ನೌ-1) ಶ್ರೀ **ಕೆ.ಎನ್. ಕುಲಕರ್ಣಿ,** ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಬಳ್ಳಾರಿ ಮತ್ತು 2) ಶ್ರೀ **ಬಿ.ವೈ. ನಿಲುಗಲ್,** ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕೊಪ್ಪಳ ರವರುಗಳ ವಿರುದ್ಧ ಸಲ್ಲಿಸಿ, ಕೊಪ್ಪಳ ಜಿಲ್ಲೆಯಲ್ಲಿ ಗಣೇಶ್‌ನಗರದಲ್ಲಿ ಕರ್ನಾಟಕ ಹೌಸಿಂಗ್

ಬೋರ್ಡ್‌ನವರು ಅಭಿವೃದ್ಧಿಪಡಿಸಿರುವ ಬಡಾವಣೆಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿರುವುದಿಲ್ಲವೆಂದು ಆಪಾದಿಸಿರುತ್ತಾರೆ.

2) ಸದರಿ ಆಪಾದನೆಗೆ ಸಂಬಂಧಿಸಿದಂತೆ, ಕೊಪ್ಪಳ ಲೋಕಾಯುಕ್ತ ಕಛೇರಿಯ ಆರಕ್ಷಕ ಉಪಾಧೀಕ್ಷಕರು ತನಿಖೆ ನಡೆಸಿ ವರದಿಯನ್ನು ಸಲ್ಲಿಸಿರುತ್ತಾರೆ. ನಂತರ ದೂರು, ತನಿಖಾ ವರದಿ, ಆಕ್ಷೇಪಣೆ ಮತ್ತು ಪ್ರತ್ಯುತ್ತರ ಹಾಗೂ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದಾಗ, ಆಪಾದಿತ ಸರ್ಕಾರಿ ನೌಕರರಾದ–1 ಮತ್ತು 2 ರವರುಗಳ ಅವಧಿಯಲ್ಲಿ ನಿರ್ವಹಿಸಿರುವ ಕಾಮಗಾರಿಗಳು ಕಳಪೆ ಗುಣಮಟ್ಟದಿಂದ ಕೂಡಿರುವ ಸಂಬಂಧ, ಸದರಿಯವರುಗಳಿಗೆ ಪರಿಶೀಲನಾ ಟಿಪ್ಪಣಿಯನ್ನು ಕಳುಹಿಸಿ, ಉತ್ತರವನ್ನು ಸಲ್ಲಿಸುವಂತೆ ಸೂಚಿಸಿದ್ದು, ಅದರಂತೆ ಆ.ಸ.ನೌ–1 ಮತ್ತು 2 ರವರು ಉತ್ತರವನ್ನು ಸಲ್ಲಿಸಿದ್ದು, ಸದರಿ ಉತ್ತರವನ್ನು ಒಪ್ಪಲು ಬಾರದ ಕಾರಣ ಆ.ಸ.ನೌ–1 ಮತ್ತು 2ರವರುಗಳು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಮಾಡಿಲ್ಲದಿರುವುದು ಕಂಡು ಬಂದಿದ್ದರಿಂದ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದಾಗಿ, ಸದರಿ ವರದಿಯನ್ವಯ ಸಕ್ಷಮ ಪ್ರಾಧಿಕಾರವು ಆದೇಶ ದಿನಾಂಕ: 21.03.2017. ರಂದು, ಮಾನ್ಯ ಉಪಲೋಕಾಯುಕ್ತ–1 ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ನಾಮ ನಿರ್ದೇಶನವನ್ನು ನೀಡಿರುವ ಮೇರೆಗೆ, ಮಾನ್ಯ ಉಪಲೋಕಾಯುಕ್ತ–1 ರವರು ದಿನಾಂಕ: 25/04/2017 ರಂದು ಅಪರ ನಿಬಂಧಕರು, ವಿಚಾರಣೆಗಳು–11 ರವರಿಗೆ ವಿಚಾರಣೆ ಮಾಡಿ ವರದಿಯನ್ನು ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ಶಿಫಾರಸ್ಸು ಮಾಡಿದ್ದು, ಉಲ್ಲೇಖ (4)ರಂತೆ ಅಪರ ನಿಬಂಧಕರು, ವಿಚಾರಣೆಗಳು–11 ರವರಿಂದ ಈ ವಿಚಾರಣಾ ಪ್ರಾಧಿಕಾರವಾದ ಅಪರ ನಿಬಂಧಕರು, ವಿಚಾರಣೆಗಳು–16 ರವರಿಗೆ ವರ್ಗಾವಣೆಗೊಂಡಿರುತ್ತದೆ.

3) ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ.ರವರ ವಿರುದ್ಧ ದೋಷಾರೋಪಣೆ (Articles of Charge) ಅನ್ನು ಅಪರ ನಿಬಂಧಕರು, ವಿಚಾರಣೆಗಳು–11 ರವರು ರಚಿಸಿದ್ದು, ಸದರಿ

ದೋಷಾರೋಪಣೆಯು ಅನುಬಂಧ–1 ಮತ್ತು ಅನುಬಂಧ–2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ.1, ಮತ್ತು 2 ರವರಿಗೆ ದಿನಾಂಕ: 01/08/2017 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## ಅನುಬಂಧ–1

## ಆರೋಪ:

4) ನೀವು ಎಂದರೆ ಒಂದನೆಯ ಆಪಾದಿತ ಸರ್ಕಾರಿ ನೌಕರರಾದ ಕೆ.ಎನ್. ಕುಲಕರ್ಣಿ ರವರು ಈ ಮೊದಲು ಬಳ್ಳಾರಿ ಸಮನ್ವಯ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸಿಕೊಂಡಿದ್ದಾಗ ಮತ್ತು ನೀವು ಎಂದರೆ ಎರಡನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಬಿ.ವೈ. ನಿಲುಗಲ್ ರವರು ಈ ಮೊದಲು ಕೊಪ್ಪಳ ಜಿಲ್ಲೆಯ ಜಿಲ್ಲಾ ಯೋಜನಾ ಕಛೇರಿಯಲ್ಲಿ ಸಹಾಯಕ ಕರ್ಯಪಾಲಕ ಅಭಿಯಂತರರಾಗಿ ಕೆಲಸ ಮಾಡಿಕೊಂಡಿದ್ದಾಗ, ಕೊಪ್ಪಳ ಜಿಲ್ಲೆಯ ಗಣೇಶ್‌ನಗರದಲ್ಲಿ ಕರ್ನಾಟಕ ಹೌಸಿಂಗ್ ಬೋರ್ಡ್‌ನವರು ಅಭಿವೃದ್ಧಿ ಪಡಿಸಿರುವ ಬಡಾವಣೆಯಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿರುವುದಿಲ್ಲ ಮತ್ತು ಅಭಿವೃದ್ಧಿಪಡಿಸಿರುವ ಬಡಾವಣೆಯು ಕಳಪೆ ಗುಣಮಟ್ಟದಿಂದ ಕೂಡಿದ್ದು, ಸದರಿ ಕರ್ತವ್ಯಲೋಪಕ್ಕೆ ನೀವುಗಳು ಜವಾಬ್ದಾರರಾಗಿದ್ದು ಆ ಮೂಲಕ ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು(ನಡತೆ) 1966 ನಿಯಮ 3(1) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

## ಅನುಬಂಧ-2

## ದೋಷಾರೋಪಣೆಯ ವಿವರ:

5) ದೂರುದಾರರಾದ ಶ್ರೀ ಜಾಕೀರ್ ಹುಸೇನ್ ಬಿನ್ ಖಾಜಾ ಹುಸೇನ್ ಕಿಲ್ಲೇದಾರ್, ಗಣೇಶನಗರ ಹೌಸಿಂಗ್ ಬೋರ್ಡ್ ಕಾಲೋನಿ, ಕೊಪ್ಪಳ ಇವರು ಕೊಪ್ಪಳ ಜಿಲ್ಲೆಯ ಗಣೇಶ್‌ನಗರದಲ್ಲಿ ಕರ್ನಾಟಕ ಹೌಸಿಂಗ್ ಬೋರ್ಡ್‌ನವರು ಅಭಿವೃದ್ಧಿಪಡಿಸಿರುವ ಬಡಾವಣೆಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿರುವುದಿಲ್ಲವೆಂದು ಆಪಾದಿಸಿರುತ್ತಾರೆ.

ಸದರಿ ಆಪಾದನೆಗೆ ಸಂಬಂಧಿಸಿದಂತೆ, ಕೊಪ್ಪಳ ಲೋಕಾಯುಕ್ತ ಕಛೇರಿಯ ಆರಕ್ಷಕ ಉಪಾಧೀಕ್ಷಕರು ತನಿಖೆ ನಡೆಸಿ ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ತನಿಖಾ ವರದಿಯಲ್ಲಿ ಈ ಕೆಳಕಂಡ ಅಂಶಗಳು ಕಂಡುಬಂದಿರುವುದಾಗಿ ವಿವರಿಸಿರುತ್ತಾರೆ.

1) ಬಡಾವಣೆಯಲ್ಲಿ ನಿರ್ಮಿಸಲಾಗಿರುವ ರಸ್ತೆಗಳ ಗುಣಮಟ್ಟವು ಕಳಪೆಯಾಗಿರುತ್ತವೆ;

2) ಚರಂಡಿ ನಿರ್ಮಾಣವು ಕಳಪೆಯಾಗಿದ್ದು, ಚರಂಡಿಯಲ್ಲಿ ಗಿಡಗಂಟಿಗಳು ಬೆಳೆದಿರುತ್ತವೆ;

3) ಕೊರೆದಿರುವ ಮೂರು ಕೊಳವೆ ಬಾವಿಗಳ ಪೈಕಿ ಎರಡು ಕೊಳವೆ ಬಾವಿಗಳಲ್ಲಿ ನೀರು ಇರುವುದಿಲ್ಲ;

4) ಓವರ್ ಹೆಡ್ ಟ್ಯಾಂಕ್‌ಗೆ ನೀರು ಸರಬರಾಜಿನ ಸಂಪರ್ಕ ಹಾಗೂ ಪಂಪ್ ಹೌಸ್ ನಿರ್ಮಾಣಗೊಂಡಿರುವುದಿಲ್ಲ;

5) ಬಡಾವಣೆಯಲ್ಲಿ ಉದ್ಯಾನವನ ನಿರ್ಮಿಸಿರುವುದಿಲ್ಲ;

6) ಮುಖ್ಯ ಚರಂಡಿಯು ಕಳಪೆ ಕಾಮಗಾರಿಯಿಂದ ಕೂಡಿರುತ್ತದೆ.

ದೂರು, ತನಿಖಾ ವರದಿ, ಆಕ್ಷೇಪಣೆ ಮತ್ತು ಪ್ರತ್ಯುತ್ತರ ಹಾಗೂ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದಾಗ, ಆಪಾದಿತ ಸರ್ಕಾರಿ ನೌಕರ–1 ಮತ್ತು 2 ರವರುಗಳ ಅವಧಿಯಲ್ಲಿ ನಿರ್ವಹಿಸಿರುವ ಕಾಮಗಾರಿಗಳು ಕಳಪೆ ಗುಣಮಟ್ಟದಿಂದ ಕೂಡಿರುವ ಸಂಬಂಧ ಸದರಿಯವರುಗಳಿಗೆ ಪರಿಶೀಲನಾ ಟಿಪ್ಪಣಿಯನ್ನು ಕಳುಹಿಸಿ, ಉತ್ತರವನ್ನು ಸಲ್ಲಿಸುವಂತೆ ಸೂಚಿಸಿದ್ದು, ಅದರಂತೆ ಆ.ಸ.ನೌ–1 ಮತ್ತು 2 ರವರು ಉತ್ತರವನ್ನು ಸಲ್ಲಿಸಿದ್ದು, ಸದರಿ ಉತ್ತರವನ್ನು ಒಪ್ಪಲು ಬಾರದ ಕಾರಣ ಆ.ಸ.ನೌ–1 ಮತ್ತು 2 ರವರುಗಳು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಮಾಡಿಲ್ಲದಿರುವುದು ಕಂಡು ಬಂದಿದ್ದರಿಂದ ಮತ್ತು ಈ ಕೃತ್ಯ ದುರ್ನಡತೆ ಎಂಬ ಪರಿಭಾಷೆಯಲ್ಲಿ ಬರುವುದರಿಂದ ಕರ್ನಾಟಕ ಸಿವಿಲ್ ಸೇವಾ (ನಡತೆ) 1966 ರಡಿ ನಿಯಮ 3(1) ರಡಿಯಲ್ಲಿ ದುವರ್ತನೆ ಮಾಡಿದ್ದಾರೆಂದು ಕಂಡುಬಂದಿದ್ದರಿಂದ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಶಿಸ್ತಿನ ಕ್ರಮಕೈಗೊಳ್ಳಬೇಕೆಂದು ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರಡಿಯಲ್ಲಿ ವರದಿಯನ್ನು ಸಲ್ಲಿಸಿದ್ದು, ಆಪಾದಿತ ಸರ್ಕಾರಿ ನೌಕರ–1 ಮತ್ತು 2 ರವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ಗೌರವಾನ್ವಿತ ಉಪಲೋಕಾಯುಕ್ತರವರು ವರದಿಯನ್ನು ಸಲ್ಲಿಸಿದ ಮೇರೆಗೆ, ಆಪಾದಿತ ಸರ್ಕಾರಿ ನೌಕರ–1 ಮತ್ತು 2 ರವರ ಶಿಸ್ತು ಪ್ರಾಧಿಕಾರವಾದ ಗೃಹ ಆಯುಕ್ತರು ಮತ್ತು ಶಿಸ್ತು ಪ್ರಾಧಿಕಾರಿಗಳು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ರವರು ಮೇಲೆ ಉಲ್ಲೇಖಿಸಿದ ಆದೇಶದಲ್ಲಿ ಇಲಾಖಾ ವಿಚಾರಣೆ ನಡೆಸಲು ಅನುಮತಿ ನೀಡಿರುತ್ತದೆ. ಅದರಂತೆ, ಗೌರವಾನ್ವಿತ ಉಪಲೋಕಾಯುಕ್ತ–1 ರವರು ಉಲ್ಲೇಖ–3 ರಂತೆ ಅಪರ ನಿಬಂಧಕರು, ವಿಚಾರಣೆ–11 ರವರಿಗೆ ನಾಮನಿರ್ದೇಶನ ನೀಡಿ ವಿಚಾರಣೆ ಕೈಗೊಂಡು ವರದಿ ಸಲ್ಲಿಸಲು ಸೂಚಿಸಿರುತ್ತಾರೆ.

ನಂತರ, ಗೌರವಾನ್ವಿತ ಉಪಲೋಕಾಯುಕ್ತರವರು No.UPLOK-1 & 2/DE/TRANSFERS/2019 DATED 07/02/2019 of the Hon'ble Registrar, Karnataka Lokayukta, Bengaluru, ರಂತೆ ಅಪರ ನಿಬಂಧಕರು, ವಿಚಾರಣೆಗಳು-11 ರಿಂದ ಅಪರ ನಿಬಂಧಕರು, ವಿಚಾರಣೆಗಳು-16 ಕ್ಕೆ ವಿಚಾರಣೆ ಮುಂದುವರೆಸಿ ವರದಿ ಸಲ್ಲಿಸಲು ಈ ಪ್ರಾಧಿಕಾರಕ್ಕೆ ವರ್ಗಾಯಿಸಲಾಗಿರುತ್ತದೆ.

6) ಈ ಮೇಲ್ಕಂಡ ದೋಷಾರೋಪಣೆ (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌ.ರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ.1 ರವರು ದಿನಾಂಕ 31.08.2017 ರಂದು ಮತ್ತು ಆ.ಸ.ನೌ-2 ರವರು ದಿನಾಂಕ: 28.10.2017 ರಂದು ಹಾಜರಾಗಿದ್ದು, ಸದರಿಯವರುಗಳ ಪ್ರಥಮ ಮೌಖಿಕ ಹೇಳಿಕೆ, ನಿಯಮ-11 ಕೆ.ಸಿ.ಎಸ್. ಸಿಸಿಎ ರೂಲ್ಸ್‌ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌ.-1 ಮತ್ತು 2 ರವರುಗಳು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

7) ಆ.ಸ.ನೌ.-1 ಮತ್ತು 2 ರವರುಗಳಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

8) ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.-1 ಮತ್ತು 2 ರವರುಗಳು ತಮ್ಮ ಪರವಾಗಿ ದಿನಾಂಕ 26/05/2018 ರಂದು ಪ್ರತ್ಯೇಕವಾಗಿ ರಕ್ಷಣಾ ಹೇಳಿಕೆಗಳನ್ನು ಸಲ್ಲಿಸಿ, 1 ಮತ್ತು 2ನೇ ಆ.ಸ.ನೌ ರವರುಗಳು ಸದರಿ ಆಪಾದನೆಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದು, ಸರ್ಕಾರದ ಆದೇಶದಂತೆ ಸದರಿ ಬಡಾವಣೆಯನ್ನು ಸುಸಜ್ಜಿತ ಕಾಮಗಾರಿ ಮಾಡಿ ದಿನಾಂಕ 21.07.2014 ರಲ್ಲಿ ಕೊಪ್ಪಳ ನಗರ ಸಭೆಗೆ ಹಸ್ತಾಂತರ ಮಾಡಲಾಗಿದ್ದು, ಬಡಾವಣೆ ನಿರ್ವಹಣೆ ಮತ್ತು ಬಡಾವಣೆ

ಮೂಲ ಸೌಕರ್ಯಗಳಾದ ನೀರು ಸರಬರಾಜು, ಬೀದಿ ದೀಪಗಳ ನಿರ್ವಹಣೆ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಕೊಡುವುದು ಸದರಿ ಕೊಪ್ಪಳ ನಗರಸಭೆಯ ವ್ಯಾಪ್ತಿಗೆ ಸಂಬಂಧಿಸಿದ್ದು ಇರುತ್ತದೆಯೆಂದು ಮತ್ತು ತಾವುಗಳು ದುರ್ನಡತೆ ಹಾಗೂ ಕರ್ತವ್ಯ ಲೋಪ ಎಸಗಿರುವುದಿಲ್ಲ ಮತ್ತು ಸರ್ಕಾರಕ್ಕೆ ಯಾವುದೇ ನಷ್ಟವು ಸಂಭವಿಸಿರುವುದಿಲ್ಲ ಮತ್ತು ತಾವುಗಳು ಸರ್ಕಾರಿ ಕೆಲಸವನ್ನು ಪ್ರಾಮಾಣಿಕವಾಗಿ ಕಾನೂನಿನ ಚೌಕಟ್ಟಿನಲ್ಲಿ ಕೆಲಸ ನಿರ್ವಹಿಸಿದ್ದು, ದುರ್ನಡತೆಯಿಂದ ನಡೆದುಕೊಂಡಿರುವುದಿಲ್ಲವೆಂದು, ಆದ್ದರಿಂದ, ತಮ್ಮನ್ನು ಈ ಆರೋಪದಿಂದ ಕೈಬಿಡುವಂತೆ ವಿನಂತಿಸಿರುತ್ತಾರೆ.

9) ಈ ವಿಚಾರಣೆಯಲ್ಲಿ, ಆ.ಸ.ನೌ.–1 ಮತ್ತು 2 ರವರುಗಳ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ತಮ್ಮ ಪರವಾಗಿ ಶ್ರೀ **ಜಾಕೀರ್ ಹುಸೇನ್** ರವರನ್ನು **ಪಿ.ಡಬ್ಲ್ಯು.1** ಎಂದು ಸಾಕ್ಷ್ಯ ನುಡಿಸಿಕೊಂಡು **ನಿ.ಪಿ.1 ರಿಂದ 7** ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯಾದ ಶ್ರೀ. **ಮುದಿಯಪ್ಪ ಚಿಕ್ಕಾರೆಡ್ಡಿ,** ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕೊಪ್ಪಳ ರವರನ್ನು **ಪಿ.ಡಬ್ಲ್ಯು.2** ಎಂದು ಸಾಕ್ಷ್ಯ ನುಡಿಸಿಕೊಂಡು, **ನಿ.ಪಿ. 8 ರಿಂದ 12** ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತದನಂತರ, ಆ.ಸ.ನೌ. 1 ಮತ್ತು 2 ರವರುಗಳ ದ್ವಿತೀಯ ಮೌಖಿಕ ಹೇಳಿಕೆಯನ್ನು ಪಡೆದುಕೊಳ್ಳಲಾಗಿರುತ್ತದೆ. ತದನಂತರ, ಆ.ಸ.ನೌ–1 ಮತ್ತು 2 ರವರುಗಳು ಕೆ.ಸಿ.ಎಸ್. ಸಿಸಿಎ ನಿಯಮ 11 (16) ರಡಿಯಲ್ಲಿ ತಮ್ಮ ರಕ್ಷಣಾ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ತಮ್ಮ ರಕ್ಷಣಾ ಹೇಳಿಕೆಯಲ್ಲಿ ಶಿಸ್ತು ಪ್ರಾಧಿಕಾರದ

ಪರವಾಗಿ ನುಡಿದಿರುವ ತನಿಖಾಧಿಕಾರಿ ಪಿಡಬ್ಲ್ಯೂ-2 ರವರು ಗುರುತಿಸಿಕೊಂಡಿರುವ ನಿ.ಪಿ-8 ತನಿಖಾ ವರದಿಯಲ್ಲಿನ ಸಂಗತಿಗಳನ್ನು ನಿರಾಕರಿಸಿರುತ್ತಾರೆ.

10) **ಆ.ಸ.ನೌ.-1** ರವರು ತಮ್ಮ ಪರವಾಗಿ ತಾವೇ **ಡಿ.ಡಬ್ಲ್ಯೂ-1** ಎಂದು ಸಾಕ್ಷ್ಯ ನುಡಿದಿದ್ದು, **ನಿ.ಡಿ.-1 ರಿಂದ 4** ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ ಮತ್ತು **ಆ.ಸ.ನೌ-2** ರವರು ತಮ್ಮ ಪರವಾಗಿ ತಾವೆ **ಡಿ.ಡಬ್ಲ್ಯೂ-2** ಎಂದು ಮೌಖಿಕ ಸಾಕ್ಷ್ಯ ನುಡಿದಿದ್ದು, ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ.

11) ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಮತ್ತು ಆ.ಸ.ನೌ.ರವರ ಪರ ಸಲ್ಲಿಸಿರುವ ಲಿಖಿತ ವಾದವನ್ನು ಪರಿಶೀಲಿಸಲಾಯಿತು.

12) ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ-1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ 1 ಮತ್ತು 2 ರವರುಗಳ ಮೇಲೆ ಆಪಾದಿಸಲಾದ ಎಲ್ಲಾ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ-2:** ಆದೇಶವೇನು?

13) ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

14) ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ.

**ಅಂಶ 1: ಸಕಾರಾತ್ಮಕವಾಗಿದೆ.**

**ಅಂಶ 2: ಅಂತಿಮ ಆದೇಶದಂತೆ**

**ಕಾರಣಗಳು:**

15) ಈ ಪ್ರಕರಣದಲ್ಲಿ ಆ.ಸ.ನೌ.–1 ಮತ್ತು 2 ರವರುಗಳ ವಿರುದ್ಧ ಆರೋಪಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ ಶ್ರೀ **ಜಾಕೀರ್ ಹುಸೇನ್** ರವರನ್ನು ಪಿ.ಡಬ್ಲ್ಯು.1 ಎಂದು ಸಾಕ್ಷ್ಯ ನುಡಿಸಿಕೊಂಡು, **ನಿ.ಪಿ.1 ರಿಂದ 7** ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. **ನಿ.ಪಿ–1** ದೂರುದಾರರು ಸಲ್ಲಿಸಿರುವ ದಿನಾಂಕ 07.04.2014 ರ ದೂರು, **ನಿ.ಪಿ–2** ಪ್ರಪತ್ರ–1, **ನಿ.ಪಿ–3** ಪ್ರಪತ್ರ–2, ದೂರುದಾರರು ದೂರಿನೊಂದಿಗೆ ಸಲ್ಲಿಸಿದ್ದ 3 ಜೆರಾಕ್ಸ್ ಪ್ರತಿಗಳನ್ನು ಒಟ್ಟಾರೆಯಾಗಿ **ನಿ.ಪಿ–4** ಗುರ್ತಿಸಿಕೊಂಡಿದ್ದು, ಅದರಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕೊಪ್ಪಳ ರವರು ದೂರುದಾರರಿಗೆ ದಿನಾಂಕ 24.03.2014 ರ ಪತ್ರದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಬೀದಿ ದೀಪಗಳ ಬಗ್ಗೆ ಅಸ್ತ ವ್ಯಸ್ತ ವಾದಲ್ಲಿ ಕೂಡಲೇ ಕ್ರಮಕೈಗೊಳ್ಳಲು ಸಂಬಂದಪಟ್ಟ ಗುತ್ತಿಗೆದಾರರಿಗೆ ತಿಳಿಸಿರುವುದು ಕಂಡುಬರುತ್ತದೆ. **ನಿ.ಪಿ–5** ತನಿಖಾಧಿಕಾರಿ ಶ್ರೀ ಎಂ.ಹೆಚ್. ಚಿಕ್ಕಾರೆಡ್ಡಿ ರವರು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕೊಪ್ಪಳ ರವರಿಗೆ ದಿನಾಂಕ 22.03.2014 ರಂದು ಬರೆದ ಪತ್ರವಾಗಿದ್ದು ದೂರುದಾರರು ರಸ್ತೆ, ಕುಡಿಯುವ ನೀರು, ಬೀದಿ ದೀಪ ಇತ್ಯಾದಿ ಮೂಲಭೂತ ಸೌಲಭ್ಯಗಳನ್ನು ಒದಗಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಅರ್ಜಿಯಲ್ಲಿ ನಮೂದಿಸಿದ್ದು, ಈ ಬಗ್ಗೆ ಸದರಿಯವರ ಮನವಿಯನ್ನು ಪರಿಶೀಲಿಸಿ ಕಾನೂನುಬದ್ಧವಾಗಿ ಕ್ರಮಕೈಗೊಂಡು ನೇರವಾಗಿ ಅರ್ಜಿದಾರರಿಗೆ ಮಾಹಿತಿ ತಿಳಿಸಲು ಕೋರಿರುತ್ತಾರೆ. **ನಿ.ಪಿ–6** ದೂರುದಾರರು ದಿನಾಂಕ 21.03.2014

ರಂದು ಲೋಕಾಯುಕ್ತರಿಗೆ ಸಲ್ಲಿಸಿರುವ ದೂರು ಅರ್ಜಿಯಾಗಿರುತ್ತದೆ. **ನಿ.ಪಿ–7** ವಿದ್ಯುತ್, ಬೋರ್‌ವೆಲ್, ಡಾಂಬರೀಕರಣ ಮಾಡಿದ ರಸ್ತೆ ಸ್ಥಿತಿಗತಿ ತೋರಿಸಲು 12 ಪೋಟೋಗಳನ್ನು ಹಾಜರು ಮಾಡಿದ್ದು, ಅವುಗಳು ನಿ.ಪಿ.–7 ಎಂದು ಗುರುತಿಸಲಾಗಿರುತ್ತದೆ.

16) ತನಿಖಾಧಿಕಾರಿಯಾದ ಶ್ರೀ. **ಮುದಿಯಪ್ಪ ಚಿಕ್ಕಾರೆಡ್ಡಿ,** ಪೋಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕೊಪ್ಪಳ ರವರನ್ನು ಪಿ.ಡಬ್ಲ್ಯು.2 ಎಂದು ಸಾಕ್ಷ್ಯ ನುಡಿಸಿಕೊಂಡು, **ನಿ.ಪಿ. 8 ರಿಂದ 12** ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. **ನಿ.ಪಿ–8** ದಿನಾಂಕ 17.04.2015 ರ ತನಿಖಾ ವರದಿ, **ನಿ.ಪಿ–9** ಆ.ಸ.ನೌ–2 ರವರ ಹೇಳಿಕೆ, **ನಿ.ಪಿ–10** ಶ್ರೀಮತಿ ಜಿ. ಶಿಲ್ಪಾ, ರವರ ಹೇಳಿಕೆ, **ನಿ.ಪಿ–11** ಕೊಪ್ಪಳ ನಗರಸಭೆಯವರು ಸದರಿ ಬಡಾವಣೆಯ ನಿವೇಶನಗಳನ್ನು ಸುಪರ್ದಿಗೆ ಪಡೆದುಕೊಂಡಿರುವ 6 ಹಾಳೆಗಳುಳ್ಳ ಪತ್ರಗಳು ಮತ್ತು **ನಿ.ಪಿ–12** ಸದರಿ ಬಡಾವಣೆಯ ಪೋಟೋಗಳನ್ನು ತನಿಖಾಧಿಕಾರಿ ತೆಗೆಸಿದ್ದು, 20 ಪೋಟೋಗಳಾಗಿದ್ದು ಸದರಿ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ.

17) ದೂರುದಾರರಾದ ಶ್ರೀ ಜಾಕೀರ್ ಹುಸೇನ್ ರವರು ತಮ್ಮ ಮೌಖಿಕ ಸಾಕ್ಷ್ಯದ ಮುಖ್ಯ ವಿಚಾರಣೆಯಲ್ಲಿ, ತಾನು ದಿನಾಂಕ 07/04/2014 ರಂದು ಕೊಪ್ಪಳ ಉಪವಿಭಾಗದ ಕೆ.ಹೆಚ್.ಬಿಯ ಎ.ಇ.ಇ. ರವರ ವಿರುದ್ಧ ದೂರನ್ನು ಸಲ್ಲಿಸಿದ್ದು, ಕೊಪ್ಪಳದ ಗಣೇಶ್ ನಗರದ ಕೆ.ಹೆಚ್.ಬಿ. ಬಡಾವಣೆಯಲ್ಲಿ ನಿರ್ಮಿಸಿದ ಮನೆಗಳಿಗೆ ಮೂಲಭೂತ ಸೌಕರ್ಯಗಳು ಇರಲಿಲ್ಲವೆಂದು ನುಡಿದಿರುತ್ತಾರೆ. ಸದರಿಯವರು ತಮ್ಮ ಸಾಕ್ಷ್ಯವನ್ನು ಮುಂದುವರೆಸಿ ಸದರಿ ಬಡಾವಣೆಯ

ಮನೆಗಳಿಗೆ ಕುಡಿಯುವ ನೀರು, ಬೀದಿ ದೀಪ, ರಸ್ತೆಗಳು ಸುಸ್ಥಿತಿಯಲ್ಲಿ ಇರಲಿಲ್ಲವೆಂದು ನುಡಿದಿರುತ್ತಾರೆ.

18) ಮುಂದುವರೆದು ಪಿಡಬ್ಲ್ಯೂ-1 ರವರು ತಮ್ಮ ಸಾಕ್ಷ್ಯದಲ್ಲಿ, ತಾವು ಈ ಬಗ್ಗೆ ಆ.ಸ.ನೌಕರರಿಗೆ ದೂರನ್ನು ನೀಡಿದ್ದರೂ ಸಹ ಯಾವುದೇ ಪ್ರಯೋಜನವಾಗಿರುವುದಿಲ್ಲ ಹಾಗೂ ತಾನು ಲೋಕಾಯುಕ್ತ ಸಂಸ್ಥೆಗೆ ದೂರು ಸಲ್ಲಿಸಿದ್ದು, ಅದು ನಿ.ಪಿ-1 ರಿಂದ 3 ಆಗಿದ್ದು, ದೂರಿನೊಂದಿಗೆ ಸಲ್ಲಿಸಲಾದ 3 ಜೆರಾಕ್ಸ್ ಪ್ರತಿಗಳು ನಿ.ಪಿ-4 ರಿಂದ 6 ಎಂದು ಗುರುತಿಸಿದ್ದು ಹಾಗೂ ಕೆ.ಹೆಚ್.ಬಿ. ಬಡಾವಣೆಯ ಮನೆಗಳ ಸ್ಥಿತಿಗತಿ ತೋರಿಸಲು ಮನೆ, ವಿದ್ಯುತ್, ಬೋರ್‌ವೆಲ್, ಡಾಂಬರೀಕರಣ ಮಾಡಿದ ರಸ್ತೆ ಸ್ಥಿತಿಗತಿ ತೊರಿಸಲು 12 ಪೋಟೋಗಳನ್ನು ಹಾಜರ್ ಮಾಡಿದ್ದು, ಅವುಗಳನ್ನು ನಿ.ಪಿ-7 ಎಂದು ಗುರುತಿಸಿಕೊಂಡಿರುತ್ತಾರೆ. ಸದರಿ ಪೋಟೋಗಳನ್ನು ಪರಿಶೀಲಿಸಿದಾಗ, ಈ ವಿವಾದಿತ ಕೆ.ಹೆಚ್.ಬಿ ಬಡಾವಣೆಯ ಮನೆಗಳ ಸ್ಥಿತಿಗತಿ, ವಿದ್ಯುತ್ ಸಂಪರ್ಕ, ಬೋರ್‌ವೆಲ್, ಡಾಂಬರೀಕರಣ ಮಾಡಿದ ರಸ್ತೆಗಳ ಸ್ಥಿತಿಗತಿಯು ಕಳಪೆಮಟ್ಟದಿಂದ ಕೂಡಿರುವುದು ಮೇಲ್ನೋಟದಲ್ಲೇ ಕಂಡು ಬರುತ್ತದೆ. ಈ ಸಾಕ್ಷಿದಾರನನ್ನು ಆ.ಸ.ನೌ ರವರುಗಳ ವಕೀಲರು ಪಾಟಿ ಸವಾಲು ವಿಚಾರಣೆಗೆ ಒಳಪಡಿಸಿದ್ದು, ತನ್ನ ಪಾಟಿ ಸವಾಲಿನಲ್ಲಿ ಈ ಕೆಳಕಂಡಂತೆ ನುಡಿದಿರುತ್ತಾರೆ.

**" ಸದರಿ ಮನೆಗಳು ಹೌಸಿಂಗ್ ಬೋರ್ಡಿನಿಂದ ಕಟ್ಟಿದ ಮನೆಗಳು ಎಂದರೆ ಸರಿ. ಸದರಿ ಮನೆಗಳ ಪೈಕಿ 1 ಮನೆಯನ್ನು ನಾನು ಹೌಸಿಂಗ್ ಬೋರ್ಡಿನಿಂದ ಮಂಜೂರು ಮಾಡಿಸಿಕೊಂಡು ಖರೀದಿ ಪತ್ರ ಮಾಡಿಕೊಂಡಿದ್ದೇನೆ. ನಿ.ಪಿ-7 ಎಲ್ಲಾ ಪೋಟೋಗಳನ್ನು ನಾನು ಈ ಲೋಕಾಯುಕ್ತ ಸಂಸ್ಥೆಗೆ ದೂರು ಸಲ್ಲಿಸುವಾಗ ತೆಗೆದಿರುವ ಪೋಟೋಗಳು ಎಂದರೆ ಸರಿ. ಸದರಿ ಮನೆಗಳನ್ನು ನಿರ್ಮಿಸಿದ ನಂತರ**

ಹೌಸಿಂಗ್ ಬೋರ್ಡ್‌ನವರು ಸ್ಥಳೀಯ ನಗರಸಭೆ ಆಯುಕ್ತರಿಗೆ ಮೂಲಭೂತ ಸೌಲಭ್ಯ ಸಲುವಾಗಿ 2015ರ ಆಗಸ್ಟ್ ತಿಂಗಳಲ್ಲಿ ಹಸ್ತಾಂತರಿಸಿರುತ್ತಾರೆ. 2015 ರ ಪೂರ್ವದಲ್ಲಿಯೇ ನಗರಸಭೆ ಆಯುಕ್ತರಿಗೆ ಹಸ್ತಾಂತರಿಸಲಾಗಿದೆ ಎಂದರೆ ಸರಿಯಲ್ಲ."

" 2015ನೇ ಸಾಲಿನಲ್ಲಿ ಲೋಕಾಯುಕ್ತ ಸಂಸ್ಥೆಯ ತಾಂತ್ರಿಕ ವಿಭಾಗದ ತನಿಖಾಧಿಕಾರಿಗಳು ಸ್ಥಳಕ್ಕೆ ಬಂದಿದ್ದರು ಎಂದರೆ ಸರಿ. ಸ್ಥಳಕ್ಕೆ ಬಂದಾಗ ಆ.ಸ.ನೌ, ನಾನು ಹೌಸಿಂಗ್ ಬೋರ್ಡಿಗೆ ಸಂಬಂಧಪಟ್ಟ ಅಧಿಕಾರಿಗಳು, ಗುಣನಿಯಂತ್ರಣಾಧಿಕಾರಿಗಳು ಸ್ಥಳದಲ್ಲಿ ಇದ್ದಿರುತ್ತಾರೆ ಎಂದರೆ ಸರಿ. ಸಾಕ್ಷಿ ಆ ಸಮಯದಲ್ಲಿ ಎಇಇ ರವರಾದ ಆ.ಸ.ನೌ–2 ರವರು ಹಾಜರಿದ್ದಿರುವುದಿಲ್ಲವೆಂದು ಸ್ವತ: ನುಡಿಯುತ್ತಾರೆ. ನಾನು ತಾಂತ್ರಿಕ ವಿಭಾಗದವರು ಮಾಡಿದ ವರದಿಗೆ ಸ್ಥಳದಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ. ಆ ಸಮಯದಲ್ಲಿ ಅಧಿಕಾರಿಗಳು 15 ದಿನದಲ್ಲಿ ಸಮಸ್ಯೆ ಬಗೆಹರಿಸುವುದಾಗಿ ಹೇಳಿ ತನ್ನ ಸಹಿ ಪಡೆದಿರುವುದಾಗಿ ಸಾಕ್ಷಿ ಸ್ವತ: ನುಡಿಯುತ್ತಾರೆ."

ಈ ಮೇಲ್ಕಂಡಂತೆ ದೂರುದಾರರು ಈ ಪ್ರಾಧಿಕಾರದ ಮುಂದೆ ಸಾಕ್ಷಿ ನುಡಿದಿರುವುದನ್ನು ಪರಿಶೀಲಿಸಿದಾಗ, ಇವರು ಸದರಿ ಹೌಸಿಂಗ್ ಬೋರ್ಡಿನಿಂದ ನಿರ್ಮಿಸಲಾದ ಮನೆಗಳ ಪೈಕಿ ಒಂದು ಮನೆಯನ್ನು ಮಂಜೂರು ಮಾಡಿಸಿಕೊಂಡು ಖರೀದಿಪತ್ರ ಮಾಡಿಕೊಂಡಿರುವುದು ಕಂಡು ಬರುತ್ತದೆ. ಅಲ್ಲದೆ, ನಿ.ಪಿ–7 (12 ಪೋಟೋಗಳನ್ನು) ಈ ದೂರುದಾರರು ಈ ಲೋಕಾಯುಕ್ತ ಸಂಸ್ಥೆಗೆ ದೂರು ನೀಡುವಾಗ ತೆಗೆಯಲಾದ ಪೋಟೋಗಳೆಂಬುದನ್ನು ಈ ಆ.ಸ.ನೌ ರವರುಗಳ ಪರ ವಕೀಲರೇ ಸೂಚಿಸಿರುವುದನ್ನು ಪರಿಶೀಲಿಸಿದಾಗ, ದೂರುದಾರರು ನಿ.ಪಿ–1 ದೂರನ್ನು ದಿನಾಂಕ 07.04.2014 ರಂದು ಈ ಸಂಸ್ಥೆಗೆ ಸಲ್ಲಿಸಿದ್ದು, ಆ ಸಂದರ್ಭದಲ್ಲಿಯೇ ತೆಗೆಯಲಾದ ಪೋಟೋಗಳು ಎಂಬುದು

ದೃಢಪಡುತ್ತದೆ. ದೂರುದಾರರು ಈ ಲೋಕಾಯುಕ್ತ ಸಂಸ್ಥೆಗೆ ಸದರಿ ದೂರನ್ನು ಸಲ್ಲಿಸುವ ಪೂರ್ವದಲ್ಲಿ ಅಂದರೆ ದಿನಾಂಕ 21.03.2014 ರಂದು ಗಣೇಶನಗರ ಗೃಹ ಮಂಡಳಿ ಕಾಲೋನಿಯಲ್ಲಿ ಮೂಲಭೂತ ಸೌಕರ್ಯ ಇಲ್ಲದಿರುವ ಬಗ್ಗೆ ಹಾಗೂ ಸಂಪರ್ಕ ರಸ್ತೆಯನ್ನು ನಿರ್ಮಿಸಿ ಅನುಕೂಲ ಮಾಡಿಕೊಡಬೇಕೆಂದು ನಿ.ಪಿ–6 ರಂತೆ ಮನವಿ ಸಲ್ಲಿಸಿದ್ದು, ಸದರಿ ಮನವಿಯ ಮೇರೆಗೆ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು/ಪಿಡಬ್ಲ್ಯೂ–2 ರವರು ನಿ.ಪಿ–5 ರಂತೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ಆ.ಸ.ನೌ–2 ರವರಿಗೆ ದಿನಾಂಕ 22.03.2014 ರಂದು ನಿ.ಪಿ–5 ರಂತೆ ಪತ್ರ ಬರೆದು, ಪತ್ರದಲ್ಲಿ ದೂರುದಾರರು ಸಲ್ಲಿಸಿದ ಮನವಿ ಅರ್ಜಿಯನ್ನು ಪರಿಶೀಲಿಸಿ ಕಾನೂನುಬದ್ದವಾಗಿ ಕ್ರಮಕೈಗೊಂಡ ಬಗ್ಗೆ ಅರ್ಜಿದಾರರಿಗೆ ನೇರವಾಗಿ ಮಾಹಿತಿ ನೀಡುವಂತೆ ಕೋರಿಕೊಂಡಿರುತ್ತಾರೆ. ಸದರಿ ಪತ್ರದನ್ವಯ ಆ.ಸ.ನೌ–2 ರವರು ದಿನಾಂಕ 24.03.2014 ರಂದು ದೂರುದಾರರಿಗೆ ಪತ್ರ ಬರೆದಿದ್ದು, ಸದರಿ ಪತ್ರದಲ್ಲಿ ಕೊಪ್ಪಳ ಪಟ್ಟಣದ ಗಣೇಶ ನಗರದಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ 100 ವಸತಿ ಯೋಜನೆ ಬಡಾವಣೆಯನ್ನು ಅಭಿವೃದ್ದಿ ಪಡಿಸಲಾಗಿರುತ್ತದೆಂದು, ಸದರಿ ಬಡಾವಣೆಯ ಕಾಮಗಾರಿಗಳ ಟೆಂಡರ್‌ನಲ್ಲಿ ಅವಕಾಶವಿರುವ ಎಲ್ಲಾ ಮೂಲಭೂತ ಸೌಕರ್ಯಗಳಾದ ರಸ್ತೆಗಳ ಡಾಂಬರೀಕರಣ, ಹೊರನೀರು ಸರಬರಾಜು ಹಾಗೂ ಒಳಚರಂಡಿ ಕಾಮಗಾರಿ ಹಾಗೂ ಚರಂಡಿ ಕಲ್‌ವರ್ಟ್ಸ್‌ಗಳು ಹಾಗೂ ಹೊರ ವಿಧ್ಯುಧೀಕರಣದ ಕಾಮಗಾರಿಗಳು ಹಾಗೂ ಬೀದಿ ದೀಪಗಳ ಕಾಮಗಾರಿಗಳನ್ನು ಮುಕ್ತಾಯಗೊಳಿಸಲಾಗಿರುತ್ತದೆಂದು ಹೇಳಿರುತ್ತಾರೆ. ಅಲ್ಲದೆ, ಈ ಕಾರಣದಿಂದ ದೂರುದಾರರು ದೂರು ಅರ್ಜಿಯಲ್ಲಿ ತಿಳಿಸಿರುವ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಬೀದಿ ದೀಪಗಳ ಬಗ್ಗೆ ಅಸ್ತವ್ಯಸ್ತವಾದಲ್ಲಿ ಕೂಡಲೇ ಕ್ರಮಕೈಗೊಳ್ಳಲು ಸಂಬಂಧಪಟ್ಟ ಗುತ್ತಿಗೆದಾರರಿಗೆ ತಿಳಿಸಿರುವುದಾಗಿ ನಿ.ಪಿ–4 ಪತ್ರವನ್ನು ದೂರುದಾರರಿಗೆ ಬರೆದಿರುತ್ತಾರೆ. ಈ

ಅಂಶವನ್ನು ಪರಿಶೀಲಿಸಿದಾಗ ದೂರುದಾರರು ಈ ಲೋಕಾಯುಕ್ತ ಸಂಸ್ಥೆಗೆ ದಿನಾಂಕ 07.04.2014 ರಂದು ನಿ.ಪಿ–1 ರಂತೆ ದೂರು ಸಲ್ಲಿಸುವ ಪೂರ್ವದಲ್ಲಿಯೇ ಸಂಬಂಧಪಟ್ಟ ಆ.ಸ.ನೌ–2 ರವರಿಂದ ನಿ.ಪಿ–4 ಪತ್ರ ಪಡೆದುಕೊಂಡಿರುವುದು ಕಂಡು ಬರುತ್ತದೆ. ದೂರುದಾರರು ಸದರಿ ಗಣೇಶ್ ನಗರ ಕೆ.ಹಚ್.ಬಿ ಕಾಲೋನಿಯ ಮೂಲಭೂತ ಸೌಕರ್ಯಗಳನ್ನು ಸರಿಯಾಗಿ ಒದಗಿಸುವಲ್ಲಿ ವಿಫಲರಾಗಿದ್ದರಿಂದಲೇ, ಅನ್ಯ ಮಾರ್ಗವಿಲ್ಲದೆ ಈ ಲೋಕಾಯುಕ್ತ ಸಂಸ್ಥೆಗೆ ದೂರು ಸಲ್ಲಿಸಿರುವುದು ಕಂಡು ಬರುತ್ತದೆ.

19. ಈ ಬಗ್ಗೆ ದೂರುದಾರರು ತಮ್ಮ ಪಾಟಿ ಸವಾಲಿನಲ್ಲಿಯೂ ಹೌಸಿಂಗ್ ಬೋರ್ಡ್‌ನವರು ಮೂರು ಬೋರ್‌ವೆಲ್‌ಗಳನ್ನು ಕೊರದಿದ್ದು ಯಾವುದರಲ್ಲಿಯೂ ಸಹ ನೀರು ಬಿದ್ದಿರುವುದಿಲ್ಲವೆಂಬುದನ್ನು ಒಪ್ಪಿಕೊಂಡಿರುತ್ತಾರೆ. ಅಲ್ಲದೆ, ತನಗೆ ಮನೆ ಮಂಜೂರು ಮಾಡಿದಾಗ ತನ್ನ ಮನೆಗೆ ಮೂಲಭೂತ ಸೌಲಭ್ಯವಿದ್ದಿಲ್ಲವೆಂದು ಸ್ಪಷ್ಟವಾಗಿ ನುಡಿದಿರುತ್ತಾರೆ. ನಿ.ಪಿ–4 ರಿಂದ 6 ಪತ್ರಗಳನ್ನು ದೂರುದಾರರು ಉದ್ದೇಶಪೂರ್ವಕವಾಗಿ ಸೃಷ್ಟಿಸಲಾಗಿದೆ ಎಂದು ಆಪಾದಿತ ಸರ್ಕಾರಿ ನೌಕರವರ ವಕೀಲರು ಸೂಚಿಸಿದ್ದನ್ನು ನಿರಾಕರಿಸಿರುತ್ತಾರೆ.

20. ಮಂಡನಾಧಿಕಾರಿಗಳು ಆಪಾದನೆಯನ್ನು ರುಜುವಾತುಪಡಿಸಲು ಪ್ರಕರಣದ ತನಿಖಾಧಿಕಾರಿಯಾದ ಮುದಿಯಪ್ಪ ಚಿಕ್ಕಾರೆಡ್ಡಿ ರವರನ್ನು ಪಿಡಬ್ಲ್ಯೂ–2 ಎಂದು ಸಾಕ್ಷಿ ನುಡಿಸಿಕೊಂಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಕೆಳಕಂಡಂತೆ ನುಡಿದಿರುತ್ತಾರೆ.

**" ವರದಿಯನ್ವಯ ವಸತಿ ಗೃಹಗಳಲ್ಲಿ ಡಾಂಬರ್ ರಸ್ತೆಗಳನ್ನು ನಿರ್ಮಿಸಿದ್ದು, ಅವು ಕಳಪೆ ಮಟ್ಟದಿಂದ ಕೂಡಿರುತ್ತದೆ. ಚರಂಡಿ ಕಾಮಗಾರಿಯೂ ಸಹ ಕಳಪೆ ಮಟ್ಟದಿಂದ ಕೂಡಿತ್ತು. ಖಾಲಿ**

ನಿವೇಶನಗಳಲ್ಲಿ ಗಿಡಗಂಟೆಗಳು ಬೆಳೆದಿದ್ದವು. 3 ಬೋರ್‌ವೆಲ್‌ಗಳ ಪೈಕಿ, 2 ಬೋರ್‌ವೆಲ್‌ಗಳಲ್ಲಿ ನೀರು ಬಿದ್ದಿರುವುದಿಲ್ಲ. ನೀರಿನ ಸೌಲಭ್ಯವಿರುವುದಿಲ್ಲ. ಓವರ್‌ಹೆಡ್ ಟ್ಯಾಂಕ್, ಗ್ರೌಂಡ್ ಸಂಪ್ ಟ್ಯಾಂಕ್ ಹಾಗೂ ಪಂಪ್ ಹೌಸ್ ನಿರ್ಮಿಸಲಾಗಿದ್ದು, ನೀರಿನ ವ್ಯವಸ್ಥೆ ಇರುವುದಿಲ್ಲ. ಸದರಿ ಬಡಾವಣೆಯಲ್ಲಿ ಪಾರ್ಕ್ ನಿರ್ಮಾಣ ಮಾಡಿರುವುದಿಲ್ಲ. ಗೃಹಗಳ ಕಿಟಕಿ ಗ್ಲಾಸ್‌ಗಳು ಒಡೆದಿದ್ದವು. ಗೃಹಗಳು ಮಳೆಯಾದಾಗ ಪಾಚಿ ಕಟ್ಟಿದ್ದಂತೆ ಕಂಡು ಬಂದಿರುತ್ತದೆ. ಮುಖ್ಯ ಚರಂಡಿ ಕಾಮಗಾರಿ ಕಳಪೆಯಾಗಿರುತ್ತದೆ. ಒಟ್ಟಾರೆ ಮೂಲ ಸೌಲಭ್ಯಗಳು ಈ ಬಡಾವಣೆಗೆ ಅಸಮರ್ಪಕವಾಗಿರುತ್ತದೆ. ಈ ಗೃಹಗಳನ್ನು ನಗರಸಭೆಯವರು ತಮ್ಮ ಸುಪರ್ದಿಗೆ ತೆಗೆದುಕೊಳ್ಳುವ ಪೂರ್ವದಲ್ಲಿ, ನೀರು ಸರಬರಾಜು ಒಳಚರಂಡಿ, ಪ್ರಾಯೋಗಿಕವಾಗಿ ಟ್ರಯಲ್ ಮಾಡಿ ತೋರಿಸಲು ಕೇಳಿಕೊಂಡರೂ ಸಹ ನ್ಯೂನ್ಯತೆಗಳನ್ನು ಸರಿಪಡಿಸದೆ, ದಿನಾಂಕ 21/07/2014 ರಂದು ಪೂರ್ತಿ ಬಡಾವಣೆಯ ನಿರ್ವಹಣೆಯನ್ನು ನಗರಸಭೆಗೆ ವಹಿಸಿದ್ದು ಕಂಡು ಬಂದಿರುತ್ತದೆ."

ಈ ರೀತಿ ತನಿಖಾಧಿಕಾರಿ ನುಡಿದಿರುವುದನ್ನು ಪರಿಶೀಲಿಸಿದಾಗ, ತನ್ನ ತನಿಖಾ ಕಾಲಕ್ಕೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ಡಾಂಬರ್ ರಸ್ತೆ ಕಾಮಗಾರಿ, ಚರಂಡಿ ಕಾಮಗಾರಿ, ಕಳಪೆಮಟ್ಟದಿಂದ ಕೂಡಿರುವುದು ಕಂಡು ಬರುತ್ತದೆ. ಅಲ್ಲದೆ, ಮೂರು ಬೋರ್‌ವೆಲ್‌ಗಳ ಪೈಕಿ ಎರಡು ಬೋರ್‌ವೆಲ್‌ಗಳಲ್ಲಿ ನೀರು ಬಿದ್ದಿರುವುದಿಲ್ಲ ಹಾಗೂ ನೀರಿನ ಸೌಲಭ್ಯವಿರುವುದಿಲ್ಲವೆಂಬುದು ಕಂಡುಬರುತ್ತದೆ. ಅಲ್ಲದೆ, ಓವರ್‌ಹೆಡ್ ಟ್ಯಾಂಕ್, ಗ್ರೌಂಡ್ ಸಂಪ್ ಟ್ಯಾಂಕ್ ಹಾಗೂ ಪಂಪ್‌ಹೌಸ್ ನಿರ್ಮಿಸಲಾಗಿದ್ದು, ಇವುಗಳಿಗೆ ನೀರಿನ ವ್ಯವಸ್ಥೆ ಇದ್ದಿರುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ, ಸದರಿ ಬಡಾವಣೆಯಲ್ಲಿ ಪಾರ್ಕ್ ನಿರ್ಮಾಣ ಮಾಡಿರುವುದಿಲ್ಲ ಹಾಗೂ ಗೃಹಗಳ ಕಿಟಕಿ ಗ್ಲಾಸ್‌ಗಳು

ಒಡೆದಿದ್ದವು ಎಂದು ಹಾಗೂ ಈ ಗೃಹಗಳು ಮಳೆಯಾದಾಗ ಪಾಚಿ ಕಟ್ಟಿದಂತೆ ಕಂಡುಬಂದಿರುವುದಾಗಿ ಹೇಳಿರುತ್ತಾರೆ. ಅಲ್ಲದೆ, ಮುಖ್ಯ ಚರಂಡಿ ಕಾಮಗಾರಿ ಸಹ ಕಳಪೆ ಮಟ್ಟದಿಂದ ಕೂಡಿದ್ದು, ಒಟ್ಟಾರೆಯಾಗಿ ಈ ಬಡಾವಣೆಗೆ ಮೂಲಭೂತ ಸೌಕರ್ಯಗಳು ಅಸಮರ್ಪಕವಾಗಿರುವುದಾಗಿ ಹೇಳಿರುತ್ತಾರೆ. ಈ ಬಗ್ಗೆ ನಿ.ಪಿ–8 ತನಿಖಾ ವರದಿಯನ್ನು ಗುರುತಿಸಿಕೊಂಡಿರುತ್ತಾರೆ. ಮುಂದುವರೆದು, ಈ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಎಂ.ಬಿ. ನೋಟ್‌ಗಳನ್ನು ಆ.ಸ.ನೌ–2 ರವರು ಹಾಜರ್‌ಪಡಿಸಿರುವುದಿಲ್ಲವೆಂದು ನುಡಿದಿರುತ್ತಾರೆ. ಈ ಸಾಕ್ಷಿದಾರನನ್ನು ಆ.ಸ.ನೌ–1 ಮತ್ತು 2 ರವರ ವಕೀಲರು ಪಾಟಿಸವಾಲು ವಿಚಾರಣೆಗೆ ಒಳಪಡಿಸಿದ್ದು, ತಮ್ಮ ಪಾಟಿ ಸವಾಲಿನಲ್ಲಿ, ಈ ಕಾಮಗಾರಿಗೆ ಸಂಬಂಧಿಸಿದಂತೆ ಅ.ಸ.ನೌ–2 ರವರಿಂದ ದಾಖಲೆ ಪಡೆದುಕೊಂಡಿರುವುದಾಗಿ ಹೇಳಿರುತ್ತಾರೆ. ಈ ತನಿಖಾಧಿಕಾರಿಗೆ ಅ.ಸ.ನೌ ಪರ ವಕೀಲರು ಸೂಚಿಸಿರುವುದನ್ನು ಪರಿಶೀಲಿಸಿದಾಗ, ದಿನಾಂಕ 21.07.2014 ರಂದು ಈ ಬಡಾವಣೆಯನ್ನು ಕೆ.ಹೆಚ್.ಬಿ ಯಿಂದ ನಗರಸಭೆಗೆ ಹಸ್ತಾಂತರ ಮಾಡಿರುವುದನ್ನು ಅ.ಸ.ನೌ ರವರು ಒಪ್ಪಿಕೊಂಡಿರುತ್ತಾರೆ. ಈ ರೀತಿ ಸೂಚಿಸಿರುವುದನ್ನು ಪರಿಶೀಲಿಸಿದಾಗ, ದಿನಾಂಕ 21.07.2014 ರ ಪೂರ್ವದಲ್ಲೆ ದೂರುದಾರರು ನಿ.ಪಿ–6 ರಂತೆ ದಿನಾಂಕ 21.03.2014 ರಂದು ದೂರು ಸಲ್ಲಿಸಿರುವುದು ಹಾಗೂ ದಿನಾಂಕ 24.03.2014 ರಂದು ಆ.ಸ.ನೌ–2 ರವರು ದೂರುದಾರರಿಗೆ ನಿ.ಪಿ–4 ರಂತೆ ಪತ್ರ ಬರೆದಿರುವುದು ರುಜುವಾತಾಗುತ್ತದೆ. ಈ ಅಂಶವನ್ನು ಪರಿಶೀಲಿಸಿದಾಗ ಈ ಅ.ಸ.ನೌ–2 ರವರು ನಗರಸಭೆಗೆ ಹಸ್ತಾಂತರಿಸುವ ಪೂರ್ವದಲ್ಲಿಯೆ, ದೂರುದಾರರು ಸದರಿ ಬಡಾವಣೆಯಲ್ಲಿನ ಮೂಲಭೂತ ಸೌಲಭ್ಯದ ಅಸಮರ್ಪಕತೆಯ ಬಗ್ಗೆ ಗಮನಕ್ಕೆ ತಂದಿರುವುದು ಸ್ಪಷ್ಟವಾಗುತ್ತದೆ.

ಆದಾಗ್ಯೂ ಸಹ ಅ.ಸ.ನೌ ರವರುಗಳು ಸೂಕ್ತ ಕ್ರಮ ಜರುಗಿಸದೆ ನಗರಸಭೆಗೆ ಹಸ್ತಾಂತರಿಸಿರುತ್ತಾರೆಂಬುದು ಸ್ಪಷ್ಟವಾಗುತ್ತದೆ.

21. ಅ.ಸ.ನೌ 1 ಮತ್ತು 2 ರವರು ಡಿ.ಡಬ್ಲ್ಯೂ–1 ಮತ್ತು 2 ಎಂದು ಮೌಖಿಕ ಸಾಕ್ಷ್ಯ ನುಡಿದಿದ್ದು ನಿ.ಡಿ.–1 ರಿಂದ 4 ರವರೆಗಿನ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ನಿ.ಪಿ–8 ತನಿಖಾ ವರದಿಯನ್ನು ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕೊಪ್ಪಳ/ಪಿಡಬ್ಲ್ಯೂ–2 ರವರು ಸಲ್ಲಿಸಿದ್ದು, ಸದರಿಯವರು ತಮ್ಮ ವರದಿಯಲ್ಲಿ ಕಳಪೆ ಗುಣಮಟ್ಟದ ಕಾಮಗಾರಿಗೆ ಸಂಬಂಧಿಸಿದಂತೆ ಉಲ್ಲೇಖಿಸಿದ್ದು ಆದರೆ, ವರದಿಯ ಕೊನೆಯಲ್ಲಿ ಸದರಿ ಕಾಮಗಾರಿಗಳು ಯಾವ ಮಟ್ಟದಲ್ಲಿ ಕಳಪೆ ಕಾಮಗಾರಿಯಾಗಿರುತ್ತದೆ ಎಂದು ತಿಳಿದುಕೊಳ್ಳಲು ಮಾತ್ರ ತಾಂತ್ರಿಕ ತಜ್ಞರನ್ನು ನೇಮಿಸಿ ವರದಿ ಪಡೆಯಬಹುದೆಂದು ಅಭಿಪ್ರಾಯಿಸಿರುತ್ತಾರೆ. ಆದರೆ, ನಿ.ಡಿ.–4 ತಾಂತ್ರಿಕ ವಿಭಾಗದ ವರದಿಯಲ್ಲಿ ಈ ಕಾಮಗಾರಿಗಳಲ್ಲಿ ಯಾವುದೇ ಲೋಪದೋಷ ಕಂಡು ಬಂದಿರುವುದಿಲ್ಲವೆಂದು ಮತ್ತು ಕಾಮಗಾರಿ ಗುಣಮಟ್ಟದಿಂದ ಕೂಡಿರುವುದಾಗಿ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಆದರೆ, ನಿ.ಪಿ–8 ತನಿಖಾ ವರದಿಯಲ್ಲಿನ ಸಂಗತಿಗಳನ್ನು ನಿರಾಕರಿಸಲು ಯಾವುದೇ ಪೂರಕ ಸಾಕ್ಷ್ಯವನ್ನು ನೀಡಿರುವುದಿಲ್ಲ. ಅ.ಸ.ನೌ–2 ರವರೇ ನೀಡಿರುವ ನಿ.ಪಿ–4 ಉತ್ತರವನ್ನು ಪರಿಶೀಲಿಸಿದಾಗ ಸದರಿ ಬಡಾವಣೆಯಲ್ಲಿನ ಕಾಮಗಾರಿಗಳು ಮುಕ್ತಾಯಗೊಳಿಸಿರುವುದಾಗಿ, ಕುಡಿಯುವ ನೀರಿನ ವ್ಯವಸ್ಥೆ, ಬೀದಿ ದೀಪಗಳ ಬಗ್ಗೆ ನ್ಯೂನ್ಯತೆ ಕಂಡುಬಂದಲ್ಲಿ ಕ್ರಮಕೈಗೊಳ್ಳಲು ಸಂಬಂಧಪಟ್ಟ ಗುತ್ತಿಗೆದಾರರಿಗೆ ತಿಳಿಸಿರುವುದಾಗಿ ಹೇಳಿರುತ್ತಾರೆ. ನಿ.ಪಿ–7 (12 ಪೋಟೋಗಳು) ಇವುಗಳನ್ನು ಪರಿಶೀಲಿಸಿದಾಗ ಕಾಮಗಾರಿಯು ಕಳಪೆ ಮಟ್ಟದಿಂದ ಕೂಡಿರುವುದು ರುಜುವಾತಾಗುತ್ತದೆ.

22) ಈ ಎಲ್ಲಾ ಕಾರಣಗಳಿಂದ ಶಿಸ್ತು ಪ್ರಾಧಿಕಾರದವರು ಆ.ಸ.ನೌ. 1 ಮತ್ತು 2 ರವರ ವಿರುದ್ಧ ಹೊರಿಸಲಾದ ಆಪಾದನೆ ದುರ್ನಡತೆ ಮತ್ತು ಕರ್ತವ್ಯಲೋಪಗಳನ್ನು ರುಜುವಾತುಪಡಿಸುವಲ್ಲಿ ಯಶಸ್ವಿಯಾಗಿರುತ್ತಾರೆಂದು ನಿರ್ಣಯಿಸಲಾಗಿದೆ. ಅಲ್ಲದೇ, ಶಿಸ್ತು ಪ್ರಾಧಿಕಾರದವರು ನೀಡಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳು ಆ.ಸ.ನೌ.1 ಮತ್ತು 2 ರವರು ಕರ್ತವ್ಯಲೋಪ ಮತ್ತು ದುರ್ನಡತೆ ಎಸಗಿರುವ ಹೆಚ್ಚಿನ ಸಂಭವನೀಯತೆ (probabilities) ಕಂಡು ಬರುತ್ತದೆ. ಈ ಎಲ್ಲಾ ಕಾರಣಗಳಿಂದ ಅಂಶ 1 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

**ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.**

## ಆದೇಶ

ಶಿಸ್ತು ಪ್ರಾಧಿಕಾರದವರು ಆ.ಸ.ನೌ–1) ಶ್ರೀ **ಕೆ.ಎನ್. ಕುಲಕರ್ಣಿ,** ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಬಳ್ಳಾರಿ ಮತ್ತು 2) ಶ್ರೀ **ಬಿ.ವೈ. ನಿಲುಗಲ್,** ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕೊಪ್ಪಳ ರವರುಗಳ ವಿರುದ್ಧ ಹೊರಿಸಲಾದ ಆರೋಪವಾದ ಕೊಪ್ಪಳ ಜಿಲ್ಲೆಯ ಗಣೇಶ್ ನಗರದಲ್ಲಿ ಕರ್ನಾಟಕ ಹೌಸಿಂಗ್ ಬೋರ್ಡ್‌ನವರು ಅಭಿವೃದ್ಧಿಪಡಿಸಿರುವ ಬಡಾವಣೆಯಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿರುವುದಿಲ್ಲ ಮತ್ತು ಅಭಿವೃದ್ಧಿಪಡಿಸಿರುವ ಬಡಾವಣೆಯು ಕಳಪೆ ಗುಣಮಟ್ಟದಿಂದ ಕೂಡಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ, ಡಾಂಬರ್ ರಸ್ತೆ ಕಾಮಗಾರಿ, ಚರಂಡಿ ಕಾಮಗಾರಿ, ಕಳಪೆ ಗುಣಮಟ್ಟದಿಂದ ಕೂಡಿದ್ದು, ನೀರಿನ ಸೌಲಭ್ಯವಿರುವುದಿಲ್ಲ, ಅಲ್ಲದೆ

ಓವರ್‌ಹೆಡ್ ಟ್ಯಾಂಕ್, ಗ್ರೌಂಡ್ ಸಂಪ್ ಟ್ಯಾಂಕ್ ಹಾಗೂ ಪಂಪ್ ಹೌಸ್ ನಿರ್ಮಿಸಲಾಗಿದ್ದು ಇವುಗಳಿಗೆ ನೀರಿನ ವ್ಯವಸ್ಥೆ ಇಲ್ಲದಿರುವುದು, ಗೃಹಗಳ ಕಿಟಕಿ ಗ್ಲಾಸ್‌ಗಳು ಒಡೆದಿದ್ದು, ಪಾಚಿ ಕಟ್ಟಿದಂತೆ ಕಂಡುಬಂದಿರುವುದು, ಮುಖ್ಯ ಚರಂಡಿ ಕಾಮಗಾರಿ ಸಹ ಕಳಪೆ ಮಟ್ಟದಿಂದ ಕೂಡಿದ್ದು, ಮೂಲಭೂತ ಸೌಕರ್ಯಗಳು ಅಸಮರ್ಪಕವಾಗಿರುವುದನ್ನು **ರುಜುವಾತುಪಡಿಸಲಾಗಿದೆ** ಎಂದು ನಿರ್ಣಯಿಸಲಾಗಿದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ-1 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

15/6

(ಸೆಲ್ವಕುಮಾರ್.ಸಿ)
ಅಪರ ನಿಬಂಧಕರು ವಿಚಾರಣೆಗಳು-16,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## PHERIST

| |
|---|
| **Witness examined on behalf of the Disciplinary Authority** |
| **PW-1**: Sri. Zakeer Hussain, dt.12/06/2019 (Complainant) (original) |
| **PW-2**: Sri. Mudiyappa Chikkareddy, dt. 26/08/2019 (Investigation Officer) (original) |
| **Witness examined on behalf of the DGO** |
| **DW-1:** Sri. K.N. Kulkarni dt.27/2/2020 (DGO-1) (Original) |
| **DW-2:** Sri. B.Y. Nilgal dt.27/2/2020 (DGO-2) (Original) |
| **Documents marked on behalf of Disciplinary Authority** |
| **Ex.P-1:** Original Complaint dated: 07.04.2014 addressed to Registrar, KLA, Bengaluru. (original) |
| **Ex.P-2:** Form No. I (Complaint) dated: 07.04.2014 (original) |
| **Ex.P-3:** Form No. II (Affidavit) dated 07.04.2014 (original) |
| **Ex.P-4 to P-6:** Along with complaint 3 letters enclosed by the complainant. (Xerox) |
| **Ex.P-7:** 12 photos to show the status of the house, road, borwell and electricity in KHB extenstion. (original) |
| **Ex.P-8**: Investigation Report of I.O. dated: 17.04.2015. (original) |
| **Ex.P.9:** Statement of DGO-2 dated: 09.01.2015 before the IO. (original) |
| **Ex.P.10:** Statement of Smt. G. Shilpa, JE, Technical Wing, CMC Koppal dated: 17.04.2015 before the IO. (original) |

| | |
|---|---|
| **Ex.P.11**: | I.O. collected 6 pages from Koppal CMC, for having received the possession of KHB houses to CMC. (certified copies) |
| **Ex.P.12**: | KHB houses, road 20 photos pested in 10 pages collected by IO. (original) |
| **Documents marked on behalf of DGOs** | |
| **Ex.D.1:** | List of members present on 10.03.2011 for recormandation of 1st milestone bill of KHB Bellary. (Xerox) |
| **Ex.D.2:** | List of members present on 24.08.2011 for recormandation of 2st milestone bill of KHB Bellary. (Xerox) |
| **Ex.D.3:** | Letter of Commissioner CMC Koppal dated: 21.07.2014 addresse to AEE, KHB, Koppal for having taken possession of 28 acer and 20 guntas from KHB for maintaince. (Xerox) |
| **Ex.D.4:** | Investigation Note sheet of AEE, TAC, Kla, Bengaluru dated: 28.04.2016. (original) |

**15ನೇ ಜೂನ್ 2020**

15/6/20

**(ಸೆಲ್ವಕುಮಾರ್.ಸಿ)**
ಅಪರ ನಿಬಂಧಕರು ವಿಚಾರಣೆಗಳು-16,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.